ಇದಕ್ಕೆ ಕೊಡುತ್ತಿಲ್ಲ. ಅದು ಯಾರದ್ದು ಎಂದು ಕೇಳಿದರೆ ಮತ್ತೆ ಅದು ಆ ಸಕ್ಕರೆ ಕಾರ್ಖಾನೆ ಪ್ರಭಾವಿ ರಾಜಕಾರಣಿಗಳದ್ದೇ. ಹಾಗಾಗಿ, ಅವರ ಸಕ್ಕರೆ ಕಾರ್ಖಾನೆಗೆ ಅನುಕೂಲವಾಗಲಿ ಎಂದು ಹೇಳಿ ಈ ಸಕ್ಕರೆ ಕಾರ್ಖಾನೆಯನ್ನು ರಿಪೇರಿ ಮಾಡಿಸುತ್ತಿಲ್ಲ ಅಂತ ಆರೋಪ ಇರುವುದು. ಇನ್ಯಾರಿಗೋ ಸಹಾಯ ಮಾಡಲಿಕ್ಕೆ ಹೋಗಿ ಇದನ್ನು ರಿಪೇರಿಯಾಗದಿರುವ ಸ್ಥಿತಿ ಬರಬಾರದು. ಹಣಕಾಸಿನ ಇಲಾಖೆ ಜೊತೆ ಮಾತನಾಡಿ ಆ ಟರ್ಬೈನ್ ರಿಪೇರಿಗೆ 2 ಕೋಟಿ ರೂಪಾಯಿ ಬಿಡುಗಡೆ ಮಾಡಿಸುವುದಕ್ಕೆ ಪ್ರಯತ್ನವಾಗಬೇಕು.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಪ್ರಶ್ನೆ ಟರ್ಬೈನ್ ಬಗ್ಗೆ ಇಲ್ಲ. ಆದರೆ, ನಾನು ಈ ಸಕ್ಕರೆ ಕಾರ್ಖಾನೆಗಳನ್ನು ರಿವ್ಯೂ ಮಾಡುವಾಗ ನನ್ನ ಗಮನಕ್ಕೆ ಏನು ಬಂದಿತ್ತು, ಅದನ್ನು ನನ್ನ ಮೆಮೊರಿಯಲ್ಲಿ ಹೇಳುತ್ತಿದ್ದೇನೆ, ಈ ಕೈಗಾರಿಕೆಗೆ ಹೊಸ ಟರ್ಬೈನ್ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ನಾವು, ಅವಶ್ಯಕತೆ ಇಲ್ಲ, ಹಣವೂ ಕೂಡ ಇಲ್ಲ, ಸರ್ಕಾರದಿಂದ ಹಣ ಕೊಡಲಿಕ್ಕಿಲ್ಲ, ಎಂದು ಹೇಳುತ್ತೇನೆ. ಆದರೆ, ನಮ್ಮ ಚಿಕ್ಕೋಡಿ ಷುಗರ್ ಫ್ಯಾಕ್ಟರಿಯಲ್ಲಿ ಹಳೆಯ ಟರ್ಬೈನ್ ಇದೆ. ಅವರು ಅದನ್ನು ಕೊಡಲಿಕ್ಕೆ ರೆಡಿ ಇದ್ದಾರೆ. ಅದು ಕಡಿಮೆ ಬೆಲೆಗೆ ಸಿಗುತ್ತದೆ, ಅದನ್ನು ತೆಗೆದುಕೊಳ್ಳಿ ಎಂದು ಡೈರೆಕ್ಟರ್ ಆಫ್ ಷುಗರ್ ಅವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ. ಆ ಕ್ರಮವನ್ನು ತೆಗೆದುಕೊಳ್ಳಲಾಗುವುದು. With regard to the supersession ನಾನು ಇಷ್ಟು ಹೇಳುತ್ತೇನೆ, ನಾನು ಈಗ ಕಾನೂನು ಸಚಿವರ ಜತೆಯಲ್ಲಿ ಮಾತನಾಡಿದ್ದೇನೆ. ಅವರ ಅಭಿಪ್ರಾಯವನ್ನು ಆದಷ್ಟು ಬೇಗ ತೆಗೆದುಕೊಂಡು ಸೆಕ್ಷ್ಟು 15 ದಿನಗಳಲ್ಲಿ we will take action as per law. Law Department ಏನು opinion ಕೊಡುತ್ತಾರೆ, ಆ ಪ್ರಕಾರ .....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹಣವನ್ನು ಯಾವಾಗ ಕೊಡುತ್ತೀರಿ? ರೈತರಿಗೆ ಮತ್ತು ಸಿಬ್ಬಂದಿಗೆ 3–3 ಕೋಟಿ ರೂಪಾಯಿ ಕೊಡುವುದು ಬಾಕಿ ಉಳಿದಿದೆ. ಅದನ್ನು ಯಾವಾಗ ಕೊಡುತ್ತೇನೆಂದು ಹೇಳಿದರೆ, ಒಳ್ಳೆಯದು.

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರದ್ದು ಲಯಬಿಲಿಟಿ ಇಲ್ಲ. ಸಕ್ಕರೆ ಕಾರ್ಖಾನೆ ಸಂಬಳ ಕೊಡಬೇಕಾಗಿದೆ. ಸಕ್ಕರೆ ಕಾರ್ಖಾನೆ ಕೇನ್ ಡ್ಯೂಸ್ ಕೊಡಬೇಕಾಗಿದೆ. ರೆಸ್ಪಾನ್ಸಿಬಿಲಿಟಿ ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ಸರ್ಕಾರದ ಟ್ರೆಜರಿಯಿಂದ ಕೊಡುವ ಬಗ್ಗೆ ಯಾವುದೂ ಪ್ರಸ್ತಾವನೆ ನಮ್ಮ ಮುಂದಿಲ್ಲ. ಹಾಗಾಗಿ, ಆ ರೈತರಿಗೆ ಕೊಡುವ ಡ್ಯೂಸ್, ಕಾರ್ಮಿಕರಿಗೆ ಕೊಡುವ ಡ್ಯೂಸ್ ಇದರ ಬಗ್ಗೆ ನಾನು ನೇರವಾಗಿ ಇಲ್ಲಿ ಹೇಳಲಿಕ್ಕೆ ಆಗುವುದಿಲ್ಲ. ಏಕೆಂದರೆ, ಪ್ರಶ್ನೆ ಅದರ ಬಗ್ಗೆ ಇದ್ದಿಲ್ಲ. ಮಾಹಿತಿ ಬೇಕಾದರೆ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : 15 ದಿನಗಳಲ್ಲಿ ಸೂಪರ್‌ಸೀಡ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ ಅಂತ ಹೇಳಿದ್ದಾರೆ. ಅದಾಗಬೇಕು.

ಕೃಷಿ ಮಾರಾಟ ಇಲಾಖೆಯಲ್ಲಿ ಬೆರಳಚ್ಚುಗಾರರಿಗೆ ಪದೋನ್ನತಿ

606(6475) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಮಾರಾಟ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆರಳಚ್ಚುಗಾರರು ಮತ್ತು ದ್ವಿತೀಯ ದರ್ಜೆ ಸಹಯಕರುಗಳ ಸಂಖ್ಯೆ ಎಷ್ಟು.

ಆ) ಬೆರಳಚ್ಚುಗಾರರು ಮತ್ತು ದ್ವಿತೀಯ ದರ್ಜೆ ಸಹಾಯಕರುಗಳಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪದೋನ್ನತಿ ನೀಡುವಾಗ ಯಾವ ನಿಯಮವನ್ನು ಅನುಸರಿಸಲಾಗುತ್ತಿದೆ.

ಇ) ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪದೋನ್ನತಿಯನ್ನು ನೀಡುವಾಗ ಎಲ್ಲಾ ಅರ್ಹತೆಯನ್ನು ಹೊಂದಿರುವ ಬೆರಳಚ್ಚುಗಾರರನ್ನು ಪರಿಗಣಿಸದಿರಲು ಕಾರಣಗಳೇನು,

ಈ) ಇಲಾಖೆಯ ಪ್ರಾರಂಭವಾದಂದಿನಿಂದ ಬೆರಳಚ್ಚುಗಾರರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪದೋನ್ನತಿಯನ್ನು ನೀಡಲಾಗುತ್ತಿದ್ದು, ಪ್ರಸ್ತುತ ಪದೋನ್ನತಿಯನ್ನು ನೀಡದಿರಲು ಕಾರಣಗಳೇನು?

ಶ್ರೀ ಪ್ರಕಾಶ್ ಬಾ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) 1. ದ್ವಿತೀಯ ದರ್ಜೆ ಸಹಾಯಕರು – 217

2. ಬೆರಳಚ್ಚುಗಾರರು – 112

ಆ) ಮತ್ತು ಇ) ದಿ: 30/10/75ರ ಸರ್ಕಾರಿ ಕಾರ್ಯಕಾರಿ ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿಸಿ:100:ಸಿಎಂಡಿ:74 ರನ್ವಯ ಪದೋನ್ನತಿ ನೀಡಲಾಗುತ್ತಿದೆ.

ಈ) ಇಲಾಖೆಯಲ್ಲಿ ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಲು ಕ್ರಮ ವಹಿಸಿರುವುದರಿಂದ ನಿಯಮಗಳನುಸಾರ ಪದೋನ್ನತಿ ನೀಡುವ ಬಗ್ಗೆ ಕ್ರಮ ವಹಿಸಲಾಗುವುದು. ಈ ಮಧ್ಯಂತರ ಅವಧಿಯಲ್ಲಿ ಪದೋನ್ನತಿ ನೀಡಲಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ಇಲಾಖೆಯವರು ಬಡ್ತಿ ಕೊಡುವುದರಲ್ಲಿ ತೀರಾ ಅನ್ಯಾಯ ಮಾಡುತ್ತಿದ್ದಾರೆ ಎನ್ನತಕ್ಕಂಥದ್ದು ಸುದ್ದಿ ಮತ್ತು ವಿಚಾರಗಳಿವೆ. ಆದ್ದರಿಂದ ಬಡ್ತಿಯಲ್ಲಿ ನೀವು ನ್ಯಾಯ ದೊರಕಿಸಬೇಕು. ಅದಕ್ಕೇನು ನೀವು ಮಾಡುತ್ತೀರಿ? ಇದು ಬಹಳ ಪ್ರಾಮುಖ್ಯವಾದದ್ದು. ಇದರ ಜೊತೆಗೆ, ಇದೇ ತರಹ ಬೆರಳಚ್ಚುಗಾರರು ಇಡೀ ರಾಜ್ಯದಾದ್ಯಂತ ಸುಮಾರು ಹತ್ತಾರು ಸಾವಿರ ಜನರಿದ್ದಾರೆ. ಹತ್ತಿಪ್ಪತ್ತು ವರ್ಷವಾದರೂ ಅವರುಗಳಿಗೆ ಸಂಪೂರ್ಣವಾಗಿ ಬಡ್ತಿ ಸಿಗದಿರುವಂಥಾದ್ದು ಇದೆ. ಇದು ಕೇವಲ ನಿಮ್ಮ ಇಲಾಖೆಗೆ ಸಂಬಂಧಪಟ್ಟಿದ್ದು. ಆದರೆ, ಸಂಪೂರ್ಣವಾಗಿ ಇಡೀ ರಾಜ್ಯದಲ್ಲಿ ಇದೇ ಪರಿಸ್ಥಿತಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಬೇರೆ ಬೇರೆ ವಿಧಾನಗಳು ಬಂದು ಬೆರಳಚ್ಚುಗಾರರನ್ನು ಸಂಪೂರ್ಣವಾಗಿ ಕಡೆಗಾಣಿಸತಕ್ಕಂಥ ವ್ಯವಸ್ಥೆಯಾಗಿದೆ. ನಿಮ್ಮ ಇಲಾಖೆಯಲ್ಲಾದರೂ ಇವರಿಗೆ ಸಂಪೂರ್ಣವಾಗಿ ಬಡ್ತಿ ಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೇ ಈಗ ನಮ್ಮ ಇಲಾಖೆಯಲ್ಲಿ ಸೆಕೆಂಡ್ ಡಿವಿಜನ್ ಅಸಿಸ್ಟೆಂಟ್ಸ್ 217 ಜನ ಇದ್ದಾರೆ. ಸೀನಿಯರ್ ಟೈಪಿಸ್ಟ್ಸ್ 112 ಜನ ಇದ್ದಾರೆ. ಸರ್ಕಾರದ ಆದೇಶ 30.10.1975ರ ಪ್ರಕಾರ ಈಗಾಗಲೇ ನಾವು ಸುಮಾರು 185 ಜನರಿಗೆ ಪ್ರಮೋಷನ್ ಅನ್ನು ನೀಡಿದ್ದೇವೆ. ಟೈಪಿಸ್ಟ್ ಮತ್ತು ಸೆಕೆಂಡ್ ಡಿವಿಜನ್ ಅಸಿಸ್ಟೆಂಟ್ಸ್‌ಗೆ ನಾವು ಈಗಾಗಲೇ ಪ್ರಮೋಷನ್ ನೀಡಿದ್ದೇವೆ. ಇನ್ನೇನು ನಮ್ಮಲ್ಲಿ ಪ್ರಮೋಷನ್ ಆಗಬೇಕಾಗಿದೆ, ನಾವೊಂದು ಸಿ ಅಂಡ್ ಆರ್ ರೂಲ್ಸ್ ಮಾಡುತ್ತಿದ್ದೇವೆ. ಆ ಸಿ ಅಂಡ್ ಆರ್ ರೂಲ್ಸ್ ಆದ ತಕ್ಷಣ ಯಾರ್ಯಾರಿಗೆ ಅರ್ಹತೆ ಇದೆ, ಹಾಗೆ ಅರ್ಹತೆ ಇದ್ದಲ್ಲಿ, ಅವರಿಗೆ ತಕ್ಷಣ ನಾವು ಪ್ರಮೋಷನ್ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಸವದತ್ತಿ ತಾಲ್ಲೂಕಿನಲ್ಲಿ ರೈತರ ಬೆಳೆ ಏಮೆ

607(6250) : ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?